ಅವರನ್ನು ನೀನು ಹೇಗೆ ಕಾಣ್ತೀಯಾ? ಅಲ್ಲಿಗೆ ನೀನು ಹೇಗೆ ತಲುಪುತ್ತೀಯಾ?' ಎಂದು ಮೈನುವಿಗೆ ಪ್ರಶ್ನೆಗಳ ಸುರಿಮಳೆಗೈದನು.

ಆಗ ಆ ಕಪ್ಪೆ ಮೈನು, 'ಯುವಕ ಮಹಾಪ್ರಭು, ನಾನೂ ಅದಕ್ಕೆ ಸಮರ್ಥನಿದ್ದೇನೆ' ಎಂದಿತು.

ಆಗ ಆ ಯುವಕ ತನ್ನ ಕಾಗದವನ್ನು ಅಂಚೆ ಪೆಟ್ಟಿಗೆಯಿಂದ ತೆಗೆದು ಕಪ್ಪೆಯ ಕೈಗಿಟ್ಟು, 'ನಿನಗೆ ಆಕಾಶಕ್ಕೆ ಹೋಗಲು ಸಾಧ್ಯವಾಗದಿದ್ದರೆ ನನ್ನ ಈ ಕಾಗದವನ್ನು ನನಗೇ ವಾಪಸ್ಸು ತಂದು ಕೊಟ್ಟು ಬಿಡು. ಆಗದಿದ್ದರೆ ನೀನು ಅದರ ಬಗ್ಗೆ ಚಿಂತೆ ಮಾಡಬೇಡ' ಅಂತ ಹೇಳಿ ಕಳಿಸಿದನು.

ಕಪ್ಪೆ ಅಲ್ಲಿಂದ ತಾನಿದ್ದ ಬಾವಿಗೆ ಹೊರಟಿತು. ಕಪ್ಪೆಯು ಆ ಕಾಗದವನ್ನು ಜೋಪಾನವಾಗಿ ತನ್ನ ಬಾಯಲ್ಲಿ ಕಚ್ಚಿಕೊಂಡು ನೀರಿನ ತಳದಲ್ಲಿ ಕುಳಿತಿತು.

ಸ್ವಲ್ಪ ಸಮಯದಲ್ಲಿ ಲಾರ್ಡ್ ಸೂರ್ಯ ಮತ್ತು ಲೇಡಿ ಚಂದ್ರಮ ಅವರ ಕಡೆಯ ಹುಡುಗಿಯರು ನೀರನ್ನು ತೆಗೆದುಕೊಂಡು ಹೋಗಲು ಆಕಾಶದಿಂದ ಜೇಡನ ಬಲೆಯ ಮೂಲಕ ಭೂಮಿಯಲ್ಲಿದ್ದ ಆ ಬಾವಿಗೆ ಬಂದರು. ಅವರು ತಮ್ಮ ಕೊಡಗಳನ್ನು ಬಾವಿಯೊಳಗೆ ಬಿಟ್ಟರು ನೀರನ್ನು ಮೊಗದುಕೊಳ್ಳಲು. ಆಗ ಆ ಕಪ್ಪೆಯು ಒಂದು ಕೊಡದೊಳಕ್ಕೆ ಹೋಗಿ ಅದರ ತಳದಲ್ಲಿ ಅಡಗಿ ಕುಳಿತಿತು. ಅನಂತರ ಆ ಹುಡುಗಿಯರು ನೀರನ್ನು ಕೊಡದಲ್ಲಿ ತುಂಬಿಕೊಂಡು ಬಾವಿಯೊಳಗಿನಿಂದ ಮೇಲಕ್ಕೆ ಎತ್ತಿದರು. ಆಗ ಆ ಕೊಡದಲ್ಲಿ ಹೋಗಿ ಕುಳಿತಿದ್ದ ಕಪ್ಪೆ ಅವರಿಗೆ ಗೊತ್ತಾಗಲಿಲ್ಲ. ಅಲ್ಲಿಂದ ಆಮೇಲೆ ಅವರು ಆಕಾಶಕ್ಕೆ ಅದೇ ಜೇಡನ ಬಲೆಯ ಮೂಲಕ ಹೊರಟು ಹೋದರು. ಅವರು ಆ ಕೊಡಗಳನ್ನು ಎಂದಿನಂತೆ ಅವರ ಮನೆಯಲ್ಲಿ ಮಾಮೂಲು ಕೋಣೆಯಲ್ಲಿಟ್ಟು ಹೋದರು. ಅವರು ಹೋದ ಮೇಲೆ ಕಪ್ಪೆ ಆ ಕೊಡದಿಂದ ಹೊರಗೆ ಬಂದಿತು, ಅದು ಕೊಡಗಳನ್ನು ಇಟ್ಟಿದ್ದ ಜಾಗದಲ್ಲಿ ಒಂದು ಮೇಜು ಇದ್ದುದ್ದನ್ನು ನೋಡಿತು. ಆಗ ಅದು ತನ್ನ ಬಳಿ ಇದ್ದ ಕಾಗದವನ್ನು ಆ ಮೇಜಿನ ಮೇಲೆ ಇಟ್ಟು, ಆ ಕೋಣೆಯ ಒಂದು ಮೂಲೆಯಲ್ಲಿ ಹೋಗಿ ಯಾರಿಗೂ ಕಾಣದಂತೆ ಅಡಗಿಕೊಂಡು ಕುಳಿತಿತು.

ಸ್ವಲ್ಪ ಸಮಯದ ನಂತರ ಆ ಕೋಣೆಗೆ ಸೂರ್ಯದೇವ ಬಂದನು. ನೀರಿನ ಕೊಡಗಳನ್ನು ಗಮನಿಸಿದನು. ನಂತರ ಮೇಜಿನ ಮೇಲೆ ಇದ್ದ ಕಾಗದವನ್ನು ನೋಡಿದನು. ಅದನ್ನು ಕೈಗೆತ್ತಿಕೊಂಡು ತನ್ನ ಪರಿವಾರದವರನ್ನು, 'ಈ ಕಾಗದ ಇಲ್ಲಿಗೆ ಹೇಗೆ ಬಂತು?' ಎಂದು ಪ್ರಶ್ನಿಸಿದನು.

ಆಗ ಆ ಜನ, 'ಸೂರ್ಯದೇವ, ನಮಗೆ ಏನೂ ಗೊತ್ತಿಲ್ಲ' ಎಂದರು. ಸೂರ್ಯದೇವ ಕಾಗದವನ್ನು ತೆರೆದು ಓದಿದ. ಅದರ ಒಕ್ಕಣೆ ಹೀಗಿತ್ತು: 'ನಾನು ಕಿಮನ್ಯೂಜ್‌ನ ಮಗ. ನಾನು ಭೂಮಿಯ ಮೇಲಿನ ಮನುಷ್ಯ. ನಾನು ಲಾರ್ಡ್ ಸೂರ್ಯ ಮತ್ತು ಲೇಡಿ ಚಂದ್ರಮರ ಮಗಳನ್ನು ಮದುವೆಯಾಗಬೇಕು...' ಎಂದಿತ್ತು. ಇದನ್ನು ಓದಿದ ಸೂರ್ಯದೇವ ತನ್ನ ಹೃದಯಕ್ಕೆ ತಾನೇ ಹೀಗೆ ಹೇಳಿಕೊಂಡನು: 'ಕಿಮನ್ಯೂಜ್ ಭೂಮಿಯ ಮೇಲೆ ಜೀವಿಸುವ ಮನುಷ್ಯ. ನಾನೂ ಮನುಷ್ಯ. ಆದರೆ ನಾನು ಆಗಸದಲ್ಲಿ ವಾಸಿಸುವವನು. ಇಲ್ಲಿಗೆ ಭೂಮಿಯಿಂದ ಅವನ ಮಗ ಹೇಗೆ ಕಾಗದ ಬರೆದ. ಇಲ್ಲಿಗೆ ಆ ಕಾಗದದ ಜೊತೆ ಯಾರು ಬಂದಿದ್ದಾರೆ? ಹಾಗಾದರೆ ಅವನು ಯಾರು?'

ಆ ನಂತರ ಸೂರ್ಯ ಆ ಕಾಗದವನ್ನು ಅತ್ತ ಪೆಟ್ಟಿಗೆಗೆ ಹಾಕಿ ಸುಮ್ಮನಾದನು.

ಸೂರ್ಯದೇವ ಕಾಗದವನ್ನು ಓದಿ ಮಡಗಿದ್ದನ್ನು ಕಪ್ಪೆ ಗಮನಿಸಿತ್ತು. ಅದು ಆ ಮೂಲೆಯಿಂದ ಮತ್ತೆ ಹೋಗಿ ಅಲ್ಲಿದ್ದ ಒಂದು ಖಾಲಿ ಕೊಡದೊಳಗೆ ಕುಳಿತುಕೊಂಡಿತು. ನಂತರ ಮತ್ತೆ ಹುಡುಗಿಯರು ನೀರು ತರಲು ಆ ಖಾಲಿ ಕೊಡಗಳನ್ನು ಎತ್ತಿಕೊಂಡು ಭೂಮಿಯ ಕಡೆಗೆ ಹೊರಟರು. ಅವರೆಲ್ಲಾ ಆ ಬಾವಿಯ ಹತ್ತಿರಕ್ಕೆ ಬಂದರು. ನೀರು ತುಂಬಿಕೊಳ್ಳಲು ತಮ್ಮ ಕೊಡಗಳನ್ನು ಬಾವಿಯೊಳಕ್ಕೆ ಬಿಟ್ಟರು. ಆಗ ಕೊಡದಲ್ಲಿದ್ದ ಕಪ್ಪೆ ಈಚೆ ಬಂದು ನೀರಿನ ತಳಕ್ಕೆ ಹೋಗಿ ಅಡಗಿ ಕುಳಿತಿತು. ನಂತರ ಆ ಹುಡುಗಿಯರು ತಮ್ಮ ಕೊಡಗಳಲ್ಲಿ ನೀರನ್ನು ತುಂಬಿಕೊಂಡು ಆಕಾಶದ ಕಡೆಗೆ ಹೊರಟು ಹೋದರು.

ನಂತರ ಕಪ್ಪೆ ಬಾವಿಯಿಂದ ಹೊರಗೆ ಬಂದು ತನ್ನ ಊರಿಗೆ ಹೋಯಿತು. ಅದು ಅಲ್ಲಿ ತನ್ನ ಮನೆಯಲ್ಲಿ ಯಾರಿಗೂ ಹೇಳದೆ ಸುಮ್ಮನೆ ಅನೇಕ ದಿನಗಳನ್ನು ಹಾಗೇ ಕಳೆಯಿತು.

ಒಂದು ದಿನ ಕಿಮನ್ಯೂಜ್‌ನ ಮಗ ನೆಗೊಂಬೊ ಕಪ್ಪೆಯನ್ನು ಕಂಡು ಕೇಳಿದ: 'ಏ ಕಪ್ಪೆ ಮಹಾಶಯ!